ಸೊಗಸನ್ನೂ ಹೆಚ್ಚಿಸಿದ್ದಾರೆ. ಕಸ ಮತ್ತು ಪೊರಕೆ ಸೇರಿ ಕಸಬೊರಕೆಯಾಗಿದೆಯೇ? ಅಥವಾ ಕಸಬರಿಕೆಯೇ ಕಸಬೊರಕೆಯಾಯ್ತೇ? ಕಸಬರಿಕೆ ಯಾ ಕಸಬರಿಗೆ ಯಾವುದು ಸರಿ? ಇದನ್ನೆಲ್ಲ ಭಾಷಾ ವಿಜ್ಞಾನಿಗಳೇ ಸ್ಪಷ್ಟಪಡಿಸಬೇಕು. ಅಣ್ಣ ತನ್ನ ಮದುವೆಗೆ ತಂಗ್ಯವ್ವನನ್ನು ಕರೆದೊಯ್ಯಲು ಬಂದಾಗ ಆಕೆ ಹೇಳುವ ಸಬೂಬು 'ಅಂಗಳ ಗುಡಿಸಲು ಜನವಿಲ್ಲ' ಎಂಬುದು. 'ಅಂಗ್ಳಾಕೆ ಆಳಿಡುವೆ, ಗಂಗ್ಳಾಕೆ ತೊತ್ತಿಡುವೆ ಜೋಕೇಲಿ ನಿನ್ನ ಕರೆದೊಯ್ವೆ' ಎಂಬುದು ಅಣ್ಣ ಕೊಡುವ ಭರವಸೆ. ಬಲಗಾಲು ಒಳಗಿರಿಸಿ ಬಂದ ನಮ್ಮ ಬ್ರೈಡ್ ಗ್ರೂಂಗಳೆಲ್ಲ ಈ ಬ್ರೂಂ ಸ್ಟಿಕ್ಕಿಗೆ ಎಷ್ಟು ಸ್ಟಿಕ್ಕಾಗಿದ್ದರು ಎಂಬುದಕ್ಕೆ ಈ ಮಾತುಗಳೇ ಸಾಕ್ಷಿ. ನಮ್ಮಂಥವರ ದಿನಗಳು ಪ್ರಾರಂಭವಾಗುವುದು ಕಸಬರಿಗೆಯಿಂದ ಎಂಬುದು ಎಲ್ಲರಿಗೂ ಗೊತ್ತು... ನಮ್ಮ ಸಭೆ ಸಮಾರಂಭಗಳ ಸಂಭ್ರಮ ಪ್ರಾರಂಭವಾಗುವುದೂ ಕಸಗುಡಿಸಿ ಬಳಿದು ರಂಗೋಲಿ ಇಕ್ಕುವುದರಿಂದಲೇ ಅಲ್ಲವೇ? ಹಾಗೆಯೇ ಮುಕ್ತಾಯವಾಗುವುದೂ ಜನ ಬಂದು ತಿಂದುಂಡು ಮಾಡಿದ ಕಸವನ್ನು ಮೂಲೆಗೆ ತಳ್ಳುವುದರಿಂದಲೇ.

ಶಿವಭಕ್ತರ ಮನೆಯ ಕಸಗುಡಿಸುವ ಕಾಯಕದ ಸತ್ಯಕ್ಕನನ್ನು ಪರೀಕ್ಷಿಸಲು ಶಿವ ಭಿಕ್ಷುಕನ ರೂಪದಲ್ಲಿ ಬಂದದ್ದು, ಅಲ್ಲಿ, 'ಹರಿ' ಎನ್ನುವ ಶಬ್ದ ಕೇಳಿ ಅನ್ಯದೇವತಾಸ್ಮರಣೆಯಾಯ್ತು ಎಂದು ಕೋಪದಿಂದ ಸತ್ಯಕ್ಕ ಸಟ್ಟುಗದಿಂದ ಶಿವನನ್ನು ಹೊಡೆದದ್ದು... ಇದು ನಮಗೆಲ್ಲ ಗೊತ್ತಿರುವ ಶಿವಶರಣೆ ಸತ್ಯಕ್ಕನ ಹನ್ನೆರಡನೇ ಶತಮಾನದ ಕಥೆ. ಆದರೆ, ನಮ್ಮೂರಿನ ಶಾಲೆ ಗುಡಿಸುವ ಸತ್ಯಕ್ಕ, ಸುಧಾರಕ ಎಂದು ಇಂಗ್ಲಿಷಿನಲ್ಲಿ ಸಹಿ ಮಾಡುವ ಪೋಲಿ ಸುಧಾಕರನನ್ನು ಪೊರಕೆಯಲ್ಲಿ ಝಾಡಿಸಿ ಓಡಿಸಿದ್ದು ಈ ಶತಮಾನದ ಕಥೆ. ಈ ಘಟನೆ ನಡೆದ ವೆರೀ ಮರುದಿನವೇ ಸುಧಾಕರ ಅಂಗಿ ಹಾಕದೆ ಬರೀ ಮೈಯಲ್ಲಿ ಊರೆಲ್ಲ ಅಡ್ಡಾಡಿ, 'ಒಂದು ಸಣ್ಣ ಗೀರು ಬರೆಯಾದ್ರು ಮೈಯಲ್ಲಿ ಬಿದ್ದೈತಾ ನೋಡಿ' ಎನ್ನುತ್ತಾ ಈ ಸುದ್ದಿಯೇ ಸುಳ್ಳು ಎಂದು ಸಾಧಿಸಿದ್ದು, 'ಸತ್ಯಕ್ಕ ಹೊಡೆದದ್ದು ಹಿಡಿಬುಡದಲ್ಲೋ ಕಡೆತುದಿಯಲ್ಲೋ' ಎಂದು ಊರ ಜನ ಕಟ್ಟೆಯ ಮೇಲೆ ಕುಳಿತು ಚರ್ಚಿಸಿದ್ದು ಎಲ್ಲವೂ ಈಗ ಹಳಸಿದ ಹಳೆಯ ಸುದ್ದಿಗಳೇ. ಬಡಿಯಲು ಹೊಡೆಯಲು 'ರಿವರ್ಸ್ ಈಸ್ ದ ಬೆಸ್ಟ್' ಎಂಬುದು ಸಣ್ಣ ಮಗುವಿಗೂ ಗೊತ್ತಿರುವ ಸಂಗತಿಯಾದರೂ ಸತ್ಯಕ್ಕನಿಗೆ ಇದು ಗೊತ್ತಾಗಲಿಲ್ಲವೇ? ಸತ್ಯ ಸತ್ಯಕ್ಕನಿಗೇ ಗೊತ್ತು ಎಂದು ಆಕಾಶ ನೋಡಿ ಕೈ ಮುಗಿದರೂ, 'ಈ ಕಸಗುಡಿಸೋ ಕಸಪೊರಕೇಲಿ ಏಟು ತಿನ್ನೋದು ಅಂದ್ರೆ ವಸಿ ಕಸ್ವಿಸಿಯ ವಿಸ್ಯನೇ ಅಲ್ಲುವಾ?' ಅಂತ ಊರ ಜನ ಮಾತಾಡಿಕೊಂಡು ಈ ಘಟನೆಗೊಂದು ತೆರೆ ಎಳೆದದ್ದೂ ಈಗ ಕೊಳೆತು ಹಳತಾದ ಸುದ್ದಿಯೇ...

(ಹೀಗೆ, ಈ ಸ್ವೀಪಿನ ಬಗ್ಗೆ ನಾನು ಇಲ್ಲಿ ಕೊಟ್ಟ ಹೇಳಿಕೆಗಳೆಲ್ಲ ನನ್ನ ಸ್ವಂತದ ಅನುಭವಗಳಾಗಿದ್ದು, 'ಸ್ವೀಪಿಂಗ್ ಸ್ಟೇಟ್‌ಮೆಂಟು'ಗಳು ಅಲ್ಲವೇ ಅಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ).

**ಇದೀಗ ಬಂದ ಸುದ್ದಿ: ಇನ್ಮುಂದೆ ಡಿಲೀಟಿನ ಚಿಹ್ನೆ ಕಸದಬುಟ್ಟಿ ಅಲ್ವಂತೆ... ಕಸಬರಿಗೆ ಅಂತೆ...**


**ರೇಶ್ಮಾ ಭಟ್**

ಹುಟ್ಟೂರು ಕೊಡಗಿನ ವಿರಾಜಪೇಟೆ. ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ನಿವಾಸಿ. ವೃತ್ತಿಯಲ್ಲಿ ಉಪನ್ಯಾಸಕಿ. 'ನವೆ ನವೋನ್ಮೇಷಶಾಲಿನೀ' ಪ್ರಕಟಿತ ಪ್ರಬಂಧ ಸಂಕಲನ. ಕತೆ, ಲಲಿತ ಪ್ರಬಂಧ, ಲೇಖನ, ಕವನ, ಹನಿಗತೆಗಳು, ಹನಿಗವನಗಳು ನಾಡಿನ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಅಂತರ್ಜಾಲ ಪತ್ರಿಕೆಯಲ್ಲಿ ಅಂಕಣಗಾರ್ತಿ. ಹವ್ಯಾಸಿ ಗಮಕಿ ಹಾಗೂ ಆಕಾಶವಾಣಿ ಬಿ ಗ್ರೇಡ್ ಕಲಾವಿದೆ.